DOC-49a
T-P-2

(1)

Reg no KRN 12 — For Influential Publicity — 26-11-76

ಸತ್ಯವಾದಿ ವಜ್ರಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily. Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

'Satyavadi' Diamond Jubilee

– 'ಸತ್ಯವಾದಿ' ವಜ್ರಮಹೋತ್ಸವ –

ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರ ಆಶೀರ್ವಾದ ಸಂದೇಶ

ಶ್ರೀ ಸತ್ಯವಾದಿ ಪತ್ರಿಕೆಯ ವಜ್ರಮಹೋತ್ಸವವು ವೈಭವಪೂರಿತವಾಗಿ ನೆರವೇರಿ, ಪತ್ರಿಕೆಯೂ, ಸಂಪಾದಕರೂ ಇನ್ನೂ ಹಲವಾರು ವರ್ಷ ನಾಗರೀಕರೆಲ್ಲರ ಅಭಿಮಾನ ಪ್ರೀತಿಯೊಂದಿಗೆ ಮುಂದುವರಿಯುತ್ತಾ ಹೆಸರುವಾಸಿಯಾಗಿ ತನ್ನ ಉತ್ತಮ ಕೀರ್ತಿಯೊಂದಿಗೆ ಮುಂದುವರಿಯಲೆಂದು ಶ್ರೀ ಶ್ರೀ ಮಹಾಸ್ವಾಮಿಗಳವರು ಶ್ರೀ ಶಾರದಾ ಚಂದ್ರಮೌಳೀಶ್ವರರನ್ನು ಪ್ರಾರ್ಥಿಸಿ ಆಶೀರ್ವದಿಸಿರುವ ಮಂತ್ರಾಕ್ಷತೆ ಪ್ರಸಾದದೊಂದಿಗೆ ಒಂದು ನೂರ ಒಂದು ರೂ. ಗಳನ್ನು ಅನುಗ್ರಹಿಸಿರುತ್ತಾರೆ.

ದಸರಾ ವಸ್ತು ಪ್ರದರ್ಶನ — ಕಾರ್ಯಕ್ರಮ

27 ನೇ ತಾ ಸಂಜೆ 6 ಕುತೂಹಲ ರಂಜಿಸಲಿರುವ ಶ್ರೀ ಪಾರ್ಟಿಯವರಿಂದ ನೃತ್ಯ 7 ಬೆಂಗಳೂರು ರಂಗನಾರಾಯಣ ಮಿತ್ರ ಮಂಡಲಿಯವರಿಂದ ಸಾಮಾಜಿಕ ನಾಟಕ ಅರು ವೆರು 29 ಸಂಜೆ 7 ಮೈಸೂರಿನ ಗಣೇಶ ಡ್ರಾಮಾಟಿಕ್ಸ್‌ರವರಿಂದ ಮಧ್ವೆ ಮುಖ್ಯಾ ನಾಟಕ

★

ಮಳೆಯ ಹಾವಳಿಯಿಂದ ಕೆಲಸ ಸ್ಥಗಿತ

ಮದರಾಸು — ಮೊನ್ನೆಯಿಂದ ವಿಪರೀತ ಮಳೆ ಆಗುತ್ತಿದ್ದು ಜೀವಿತದಲ್ಲಿ ತಳ ಮಳೆ ದೆ. ಕೊಳಚೆ ಪ್ರದೇಶವು ನೀರಿನಿಂದ ಮುಳುಗಿ ಅಕ್ಷರಶಃ ಬೇರೆಯ ಕಡೆಗೆ ಸಾಗಿಸಲಾಗಿದೆ ವಿಮಾನ ಓಡಾಟ, ರೈಲ್ವೆ ಸಂಚಾರವು ತುಂಬುವುದು ಇಳಿಸುವುದು ತಟಸ್ಥಗೊಂಡಿದೆ

○

ರಷ್ಯದಿಂದ ಪೆಟ್ರೋಲು ಪದಾರ್ಥಗಳ ಆಮದು

ನವ ದೆಹಲಿ — ಭಾರತವು ರಷ್ಯಾದಿಂದ 1977 ರಲ್ಲಿ 1-4 ಮಿಲಿಯ ಪೆ ಟ್ರೋಲು ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತದೆ ಇದರಲ್ಲಿ ಸೀಮೆ ಎಣ್ಣೆ ಮತ್ತು ಡೀಸೆಲ್ ಎಣ್ಣೆ ಸೇರಿದೆ

○

ಯುವತಿ ಮಹಿಳೆಯರು ತೆರಿಗೆಯನ್ನು ಕೊಟ್ಟಿಲ್ಲ.

ನವ ದೆಹಲಿ — ಒರ್ವ ಯುವತಿ ಮಹಿಳೆಯು (ಧರ್ಮಗುರು) ಹೊಂದಿರುವ 8 ಲಕ್ಷ ರೂಪಾಯಿ ಬಗ್ಗೆ ಆದಾಯ ತೆರಿಗೆ, ಸಂಪತ್ತು ತೆರಿಗೆ, ದಾನ ತೆರಿಗೆ ಹಲವು ವರ್ಷಗಳಿಂದ ಕೊಡಬೇಕಿರುವುದು ಹೊರಬಿದ್ದಿದೆ.

★ ಶ್ರೀಮತಿ ಜಯಲಕ್ಷ್ಮಿ ಜೋಗಿ ಸಿದ್ದಯ್ಯ ಮತ್ತು ಶ್ರೀ ಬಿ ಸಿ ಲಿಂಗಯ್ಯನವರನ್ನು ಮೈಸೂರು ಜಿಲ್ಲಾ ಜೈಲಿನ ಸ್ಥಾಯಿ ಸಮಿತಿಗೆ 3 ವರ್ಷಗಳ ಕಾಲ ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿದೆ

ಸುಪ್ರೀಂ ಕೋರ್ಟು ತೀರ್ಪು

ನವ ದೆಹಲಿ — ಬೊಂಬಾಯಿ ಹೈ ಕೋರ್ಟು ಒಂದು ಚಿಕ್ಕ ಫಲಹಾರ ಮಂದಿರದ ಮಾಲೀಕ ಕೃಷ್ಣನ್ ಥಂಬಾರ್ ಮತ್ತಿತರರು ಎಮ್ಮೆಯ ಹಾಲನ್ನು ಹಸುವಿನ ಹಾಲು ಎಂದು ಮಾರಿದ್ದಕ್ಕಾಗಿ ತಲಾ 6 ತಿಂಗಳು ಸಜೆ ಮತ್ತು ರೂ 500ದಂಡ ವಿಧಿಸಲ್ಪಟ್ಟಿದ್ದರು ಇದರ ವಿರುದ್ಧ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಈ ಶಿಕ್ಷೆ ಪ್ರಾಯಂ ಆಯಿತು ಮತ್ತು ಹಸು, ಎಮ್ಮೆ, ಆಡು, ಒಂಟೆ, ಕತ್ತೆ ಮತ್ತು ಕುದುರೆ ಈ ಹಾಲು ಪ್ರತಿಯೊಂದರಿಂದರಿಂದಲೂ ಬೇರೆ ಆಗಿದ್ದು, ಜನರ ವಿವಿಧ ಭಾಗಗಳಿಂದ ಸೇವಿಸಲ್ಪಡುವುದು, ಕೆಲವು ಸಾರಿ ಖಾಯಿಲೆಗಳಿಗೆ, ಕೆಲವು ಸಾರಿ ಆರೋಗ್ಯ ಉತ್ತಮತೆಗೆ ಮತ್ತು ಕುದುರೆ ಹಾಲು ಉಲ್ಲಾಸಗೊಳಿಸಲು ಮತ್ತು ಆಹಾರಕ್ಕೆ ಉಪಯೋಗಿಸಲಾಗುವುದು, ಅವು ಆಹಾರದ ವಿವಿಧ ಪದಾರ್ಥಗಳಾಗಿದ್ದು ಒಂದನ್ನು ಮತ್ತೊಂದಕ್ಕೆ ಸೂಚನೆ ಪಡಿಸಲಾಗದು ಎಂದು ಕೋರ್ಟು ತೀರ್ಪಿತ್ತಿತು.

(ನ 18)

★

ಉಪವಾಸ ಇಲ್ಲ

ಪುಣೆ — ದೇಶದಲ್ಲಿ ಗೋವಧೆ ನಿರೋಧದ ಕೇಳಿಕೆಗಾಗಿ ಆಚಾರ್ಯ ವಿನೋಬಾ ರವರು ಉಪವಾಸಕ್ಕೆ ಗೊಳ್ಳುವುದಿಲ್ಲವೆಂದು ಕೆಲವು ಪತ್ರಿಕೆಯವರೊಡನೆ ಮಾತನಾಡುತ್ತಾ ತಿಳಿಸಿದರು

★

ಹಣ ದುರುಪಯೋಗ

ಬೆಂಗಳೂರು — ಮೈಕೊ ನೌಕರರ ಸಹಕಾರ ಸಂಘದಲ್ಲಿ ರೂ 70 ಲಕ್ಷ ದುರುಪಯೋಗವಾಗಿರುವ ಶಂಕಿತ ತನಿಖೆ ನಡೆಯುತ್ತಿದೆ.

●

ಮೈಸೂರು ವಿವಿ ಮೊಹಲ್ಲ ಕನ್ನಡ ರಾಜ್ಯೋತ್ಸವ ಸಮಿತಿ ಈ ತಿಂಗಳ 28 ನೇ ತಾ ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿದೆ

9 ಮಂದಿಯ ಮರಣ

ಮದರಾಸು — ಮದರಾಸಿನಲ್ಲಿ ನಿನ್ನೆ ದಾಖಲಾತಿ ಮಳೆಯಾಗಿದ್ದು 9 ಮಂದಿ ವ್ಯಕ್ತಪಟ್ಟರು.

●

ಮಳೆಯ ದೆಸೆಯಿಂದ

ಬೆಂಗಳೂರು — ನಿನ್ನೆ ನಿರಂತರ ಸೋನೆಯ ಮಳೆ ಮಧ್ಯೆ ಮಧ್ಯೆ ಜೋರಾಗಿ ಬೀಳುತ್ತಿದ್ದು ನಗರ ಜೀವಿತ ಅಸ್ತವ್ಯಸ್ತ ಆಗಿತ್ತು.

●

ಕೆರೆ ಒಡೆದು ಪ್ರವಾಹ

ಮದರಾಸು — ಶ್ರೀ ಪೆರಂಪುಡೂರು ಕೆರೆ ಒಡೆದು ಒಂದು ಪ್ರವಾಹದಲ್ಲಿ ಸಿಕ್ಕಿ ಬಿದ್ದ ಇಬ್ಬರು ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತೊಬ್ಬ ರಾಜ್ಯ ಸರ್ಕಾರಿ ಅಧಿಕಾರಿಗಳಲ್ಲಿ ಒಬ್ಬರು ನಾಪತ್ತೆ ಆಗಿದ್ದಾರೆ.

○

ನಾಯಿಗಳಿಗೆ ಭೂಮಿ

ರಾಯಪುರ — ದುರ್ಗ್ ಜಿಲ್ಲೆಯ ಶ್ರೀ ಮಂತ ಪ್ರಮುಖ ಕಂಟ್ರಾಕ್ಟರ್ ಓರ್ವರು ತನ್ನ ಸಾಕು ನಾಯಿಗಳಾದ ಮೋತಿ, ಜಾಕೂಗಳ ಹೆಸರಿನಲ್ಲಿ ಕೆಲವು ಭೂಮಿಯನ್ನು ರಿಜಿಸ್ಟರ್ ಮಾಡಿಸಿದ್ದಾನೆ

★

ಹಾಲಿನ ವ್ಯಾನ್ ಕಳವು

ಸಿರಸಿ — ಹಿಟ್ಟಕಾಡ್ ಕ್ರಾಸ್‌ನಲ್ಲಿ ಒಂದು ಹಾಲಿನ ವ್ಯಾನ್ ಕಳವಾಗಿದೆ. ಅಂಕೋಲ ಮತ್ತು ಕಾರವಾರ್‌ನಲ್ಲಿ ಸರಬರಾಜಿಗೆ ಹಾಲು ತೆಗದುಕೊಂಡು ಹೋಗಲಾಗುತ್ತಿತ್ತು.

● ಪಿಟ್ಸ್‌ಬರ್ಗ್ — 17 ನೇ ತಾ. ಇಲ್ಲಿ ಪೂರ್ಣ ನೇದಿ ವಿಧಿಯಿಂದ ಶ್ರೀ ವೆಂಕಟೇಶ್ವರ, ಪದ್ಮಾವತಿ ಮತ್ತು ಆಂಡಾಳ್ ವಿಗ್ರಹ ಇವು ಪ್ರತಿಷ್ಠಿಸಲ್ಪಟ್ಟವು.

ಹಿಂದೂಧರ್ಮ ಬೆಂಬಲಕ್ಕೆ ಕರೆ

ಕಡಲೂರು — ಪತ್ರಿಕೆಗಳು ಹಿಂದೂಧರ್ಮಕ್ಕೆ ಬೆಂಬಲ ಕೊಡುವಂತೆ ಕಂಚಿ ಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯರು ಹೇಳಿದರು ಸಿನಿಮಾಗಳಲ್ಲಿ ಒಂದು ಬಿಟ್ಟಿ ಕೊಡುವ ಪತ್ರಿಕೆಗಳು ಹಿಂದೂಧರ್ಮಕ್ಕೆ ಒಂದು ಕಾಲಂ ಆದರೂ ಕೊಡಬೇಕೆಂದು ಹೇಳಿದರು.

○

ಸರ್ಕಾರದಿಂದ ಹಣ ಮಂಜೂರು

ಬೆಂಗಳೂರು — ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಜ್ಞಾನಪೀಠ ಸ್ಥಾಪನೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ರೂ 5 ಲಕ್ಷ ಬಿಡುಗಡೆ ಮಾಡಿದೆ.

●

ದೇಶದ ಅಭಿವೃದ್ಧಿಯ ಸಾಂಕೇತಿಕ ನಾಣ್ಯ

ಮಲೇಷಿಯವು ದೇಶದ ಅಭಿವೃದ್ಧಿ ಪ್ರಯತ್ನದಲ್ಲಿ ಗುರುತಿಗಾಗಿ 14 ಪಕ್ಕಗಳಿರುವ ನಾಣ್ಯಗಳನ್ನು ಮುದ್ರಿಸಲಿದೆ

●

ನೀರು ಬಾಯಾರಿಕೆ ರಾಷ್ಟ್ರ ಆದೀತು

ನವ ದೆಹಲಿ — ಭಾರತದಲ್ಲಿ ನೀರಿನ ವ್ಯವಸಾಯದಲ್ಲಿ ಈಗಿನ ಪರಿಸ್ಥಿತಿಯು ಮುಂದುವರಿದರೆ 1990 ರ ಹೊತ್ತಿಗೆ ಭಾರತವು ನೀರಿನ ಬಾಯಾರಿಕೆ ರಾಷ್ಟ್ರ ಆಗುವುದೆಂದು ಖ್ಯಾತ ಅರ್ಥ ಶಾಸ್ತ್ರಜ್ಞ ಶ್ರೀ ವೊಡ್ಡ್ ಹೇಳಿರುವರು

★

ಸುಪ್ರೀಂ ಕೋರ್ಟು ನ್ಯಾಯವಾದಿ ಸಂಘ

ನವ ದೆಹಲಿ — ಸುಪ್ರೀಂ ಕೋರ್ಟಿನ ಲಾಯರುಗಳ ಒಂದು ತಂಡ ಸುಪ್ರೀಂ ಕೋರ್ಟಿನ ಲೀಗಲ್ ಮತ್ತು ಸಲಹಾ ಸಂಘ ಸ್ಥಾಪಿಸಿದೆ ಬಡವರಿಗೆ ನ್ಯಾಯಾಂಗ ನೆರವು ಕೊಡಲು

○

ವಾರಸುದಾರರಿಲ್ಲದ ಬೈಸಿಕಲ್‌ಗಳು

ಬೆಂಗಳೂರು — ನಗರದ ಹಲವು ಕಡೆಗಳಿಂದ ಪತ್ತೆ ಮಾಡಿರುವ ಸಾವಿರ ಬೈಸಿಕಲ್‌ಗಳು ವಾರಸುದಾರರಿಲ್ಲದೆ ಬಿದ್ದಿರುವರೆಂದು ಪೋಲೀಸು ಕಮೀಷನರ್‌ರವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

★

ಗಂಗಾನದಿಯಲ್ಲಿ ಪ್ರಯಾಣ ಸಾಹಸ

ನವ ದೆಹಲಿ — 3 ಮಂದಿ ಅಮೆರಿಕನರು ಮತ್ತು ಓರ್ವ ಭಾರತೀಯರು ದೇವಪ್ರಯಾಗದಿಂದ ರಿಷಿಕೇಷದ ವರೆಗೆ ಪ್ರಕ್ಷುಬ್ಧ ಗಂಗಾನದಿಯ ಮೇಲೆ ಗಾಳಿ ತುಂಬಿದ ದೋಣಿಯಲ್ಲಿ ಹೋಗುವ ಅದ್ಭುತ ಸಾಹಸ ಕಾರ್ಯಕ್ಕೆ ಕೈಗೊಳ್ಳುವರು 2 ಕ್ಯಾಮರಾಮೆನ್ ಹೊತೆಯಲ್ಲಿ ಇರುವರು.

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಆರ್ಥಾತ್ ವಜ್ರ ಮಹೋತ್ಸವವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಸ್ತುತ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ, ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

ವುಡ್‌ಲ್ಯಾಂಡ್ 26 11 76 ರಿಂದ

ಅವಮೋಘ ಆರಂಭ

ನೂತ್ರದ ಬೊಂಬೆ

ಸಾಹ್ಯ – ಶ್ರೀನಾಥ್, ಉದಯಕುಮಾರ್, ನರಸಿಂಹರಾಜು, ವಂಜುಳ (ದಕ್ಷಿಣ)

ಕನ್ನಡ

ಕಲರ್

ದಿನ 4 ಪ್ರದರ್ಶನಗಳು

ಅಪೆರಾ 26 11 76ರಿಂದ

ಅಕ್ಕರ

ಕೈ ಅಂ ವಿಜಯ ಜೈಗಣೇಶ್ ಮನೋಹರ್ ಅಭಿನಯ

ತಮಿಳು

ಪ್ರತಿ ದಿನ 3 ಪ್ರದರ್ಶನ

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet Mysore

Edited Printed and Published by Dharmapracharanirata M S. Krishna Rao (Proprietor) at the Satyavadi Press Chamarajapuram Mysore 4